# ಶ್ರೀ ಮಾತಾಜಿ ನಿರ್ಮಲಾ ದೇವಿ —

## ಆಯ್ದ ಘಟನೆಗಳ ಕಾಲಕ್ರಮ

ಶ್ರೀಮಾತಾಜಿಯವರು  ತಮ್ಮಜೀವನದುದ್ದಕ್ಕೂ ಅನೇಕ ದೇಶಗಳಿಗೆ ಮತ್ತು ಸ್ಥಳಗಳಿಗೆ ಪ್ರವಾಸ ಮಾಡಿದರು. ವಿಶೇಷವಾಗಿ **1970**ರಿಂದ **2000**ರ ದಶಕದ ಆರಂಭದವರೆಗೆ, ಅವರು ನಿರಂತರವಾಗಿ ಪ್ರವಾಸ ಮಾಡಿ, ಎಲ್ಲರಿಗೂ ಉಚಿತ ಸಾರ್ವಜನಿಕ ಉಪನ್ಯಾಸಗಳನ್ನು ನೀಡುತ್ತಾ, ಆತ್ಮಸಾಕ್ಷಾತ್ಕಾರದ ಅನುಭವವನ್ನು ನೀಡಿದರು.

ಈ ಅಮೂಲ್ಯ ಅನುಭವವನ್ನು ಇತರರಿಗೂ ನೀಡಲು ಮತ್ತು ಅದನ್ನು ನಿರಂತರವಾಗಿ ಉಳಿಸಿಕೊಳ್ಳಲು ಅಗತ್ಯವಾದ ತಂತ್ರವನ್ನು — ಸಹಜಯೋಗ ಧ್ಯಾನವನ್ನು — ಅವರು ಜನರಿಗೆ ಕಲಿಸಿದರು.

ಅವರ ಜೀವನದಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ ಕೆಲವು ಆಯ್ದ ಘಟನೆಗಳ ಸಂಕ್ಷಿಪ್ತ ಕಾಲಕ್ರಮ ಇಲ್ಲಿದೆ:

**1923 —** ಮಾರ್ಚ್ **21**ರಂದು ಭಾರತದ ಛಿಂದ್ವಾರಾದಲ್ಲಿ ಜನಿಸಿದರು.

**1930 —** ಏಳು ವರ್ಷ ವಯಸ್ಸಿನಲ್ಲಿ ಮಹಾತ್ಮ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿ ಭಾಷಣ ಮಾಡಿದರು.

**1940**ರ ದಶಕ **—** ಭಾರತದ ಲಾಹೋರ್‌ನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು.

**1947 —** ಭಾರತದ ರಾಜಕೀಯಅಶಾಂತಿಯ ಕಾರಣದಿಂದ ಅವರ ಶಿಕ್ಷಣವು ಮಧ್ಯದಲ್ಲೇ ಸ್ಥಗಿತಗೊಂಡಿತು.

ಭಾರತದ ಸ್ವಾತಂತ್ರ್ಯ.

ಚಂದ್ರಿಕಾ ಪ್ರಸಾದ್ ಶ್ರೀವಾಸ್ತವರೊಂದಿಗೆ ವಿವಾಹ.

ಮೊದಲ ಪುತ್ರಿ ಕಲ್ಪನಾ ಜನನ.

**1950 —** ಎರಡನೇ ಪುತ್ರಿ ಸಾಧನಾ ಜನಿಸಿದರು.

**1961 —** ಭಾರತದ ಮುಂಬೈನಲ್ಲಿ **'**ಯೂತ್ ಸೊಸೈಟಿ ಫಾರ್ ಫಿಲ್ಮ್ಸ್**'** ಸಂಸ್ಥೆಯನ್ನು ಪ್ರಾರಂಭಿಸಿದರು ಮತ್ತು ಚಲನಚಿತ್ರ ಸೆನ್ಸಾರ್ ಮಂಡಳಿಯ ಸದಸ್ಯರಾಗಿದ್ದರು.

**1964 —** ಅವರ ಪತಿ ಸಿ.ಪಿ. ಶ್ರೀವಾಸ್ತವ ಅವರು ಭಾರತದ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಂಟಿ ಖಾಸಗಿ ಕಾರ್ಯದರ್ಶಿಯಾದರು.

**1966 —** ಅವರ ಪತಿ ಸಿ.ಪಿ. ಶ್ರೀವಾಸ್ತವ ಅವರು ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಮುಖ್ಯಸ್ಥರಾದರು.

**1970 —** ಮೇ **5**ರಂದು ಭಾರತದ ನರ್ಗೋಲ್‌ನಲ್ಲಿ ಸಹಸ್ರಾರ ಚಕ್ರದ ಉದ್ಘಾಟನೆ ನಡೆಯಿತು. ಇದರಿಂದ ಆಧ್ಯಾತ್ಮಿಕತೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಜನಸಾಮಾನ್ಯರಿಗೆ ಸಾಮೂಹಿಕವಾಗಿ ಆತ್ಮಸಾಕ್ಷಾ ತ್ಕಾರವನ್ನು ಪಡೆಯುವ ಸಾಧ್ಯತೆ ಉಂಟಾಯಿತು.

ಅದೇ ವರ್ಷ ಇರಾನ್‌ನ ಟೆಹ್ರಾನ್‌ನಲ್ಲಿ ಮೊದಲ ಅಂತರರಾ ಷ್ಟ್ರೀಯ ಸಹಜಯೋಗ ಕಾರ್ಯ ಕ್ರಮ ನಡೆಯಿತು.

**1971 —** ಸಹಜಯೋಗದ ಸ್ಥಾಪನೆ.

**1972 —** ಹಡಗಿನ ಮೂಲಕ ಭಾರತ ದಿಂದ ಅಮೆರಿಕಕ್ಕೆ ಪ್ರಯಾಣ ಮಾಡಿದರು.

**1973 —** ಭಾರತದ ಧುಲಿಯಾದಲ್ಲಿ ಮೊದಲ ಸಹಜಯೋಗ ಸಾರ್ವ ಜನಿಕ ಕಾರ್ಯಕ್ರಮ ನಡೆಯಿತು.



© 2023 Shri Mataji Nirmala Devi Sahaja Yoga World Foundation



ಅಮೆರಿಕಾಕ್ಕೆ ಪ್ರವಾಸ ಮಾಡಿದರು.

**1982 —** ಅನೇಕ ವರ್ಷಗಳ ಕಾಲ ಮುಂದುವರಿದ ವಾರ್ಷಿಕ ಸಹಜಯೋಗ ಭಾರತ ಪ್ರವಾಸಗಳ ಸರಣಿ ಪ್ರಾರಂಭವಾಯಿತು.

**1983 —** ಅವರ ಪತಿ ಸಿ.ಪಿ. ಶ್ರೀವಾಸ್ತವ ಅವರು ಸ್ವೀಡನ್‌ನ ಮಾಲ್ಮೋದಲ್ಲಿರುವ ವರ್ಲ್ಡ್ ಮೆರಿಟೈಮ್ ಯೂನಿವರ್ಸಿಟಿಯ ಸ್ಥಾಪಕ ಕುಲಪತಿಯಾದರು.

**1985 —** ಭಾರತದ ಗಣಪತಿಪುಲೆಯಲ್ಲಿ ಮೊದಲ ಅಂತರರಾಷ್ಟ್ರೀಯ ಸಹಜಯೋಗ ವಿಚಾರ ಸಂಕಿರಣ ನಡೆಯಿತು.

**1986 —** ಇಟಲಿ ಸರ್ಕಾರದಿಂದ **'ವರ್ಷದ ವ್ಯಕ್ತಿತ್ವ' (Persona lity of the Year)** ಪ್ರಶಸ್ತಿಯನ್ನು ಪಡೆದರು.

**1987 —** ಸಾರ್ವಜನಿಕ ಕಾರ್ಯಕ್ರಮಗಳ ಮೂಲಕ ಸಹಜಯೋಗವನ್ನು ಪರಿಚ ಯಿಸಲು ಸೋವಿಯತ್ ಒಕ್ಕೂಟಕ್ಕೆ ಪ್ರವಾಸ ಮಾಡಿದರು.

**1989 —** ಸಾರ್ವಜನಿಕ ಕಾರ್ಯಕ್ರಮಗಳ ಮೂಲಕ ಸಹಜಯೋಗವನ್ನು ಪರಿಚಯಿ ಸಲು ದಕ್ಷಿಣ ಅಮೆರಿಕಾಕ್ಕೆ ಪ್ರವಾಸ ಮಾಡಿದರು.

**1990 —** ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಿಬ್ಬಂದಿಗಾಗಿ ಮೊದಲ ಸಹಜಯೋಗ ಕಾರ್ಯಕ್ರಮ ನಡೆಯಿತು.

ಅವರ ಪತಿ ಸಿ.ಪಿ. ಶ್ರೀವಾಸ್ತವ ಅವರಿಗೆ ಇಂಗ್ಲೆಂಡ್‌ನಲ್ಲಿ ರಾಣಿ ಎಲಿಜಬೆತ್ **II** ಅವರು ನೈಟ್‌ಹುಡ್ ಗೌರವ ನೀಡಿದರು.

ಮಾಸ್ಕೋದಲ್ಲಿ ನಡೆದ ವೈದ್ಯಕೀಯ ಸಮ್ಮೇಳನವ ನ್ನುದ್ದೇಶಿಸಿ ಶ್ರೀ ಮಾತಾಜಿ ಯವರು ಮಾತನಾಡಿದರು.

ಭಾರತದ ಧರ್ಮಶಾಲಾದಲ್ಲಿ ಸಹಜಯೋಗ ಅಂತರರಾ ಷ್ಟ್ರೀಯ ಶಾಲೆ ಸ್ಥಾಪಿಸಲಾ ಯಿತು.



© 2023 Shri Mataji Nirmala Devi Sahaja Yoga World Foundation

**1991 —** ಇಟಲಿಯ ಕಬೆಲ್ಲಾ ಲಿಗುರೆಗೆ ಸ್ಥಳಾಂತರಗೊಂಡರು.

**1992 —** ಲಂಡನ್‌ನ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ ಮೊದಲ ಸಾರ್ವಜನಿಕ ಕಾರ್ಯಕ್ರಮ ನಡೆಯಿತು.



**1993 —** ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನ ಪೆಟ್ರೋವ್ಸ್ಕಯಾ ಅಕಾಡೆಮಿ ಆಫ್ ಆರ್ಟ್ ಅಂಡ್ ಸೈನ್ಸ್‌ನ ಗೌರವ ಸದಸ್ಯರಾಗಿ ನೇಮಕ ಗೊಂಡರು.

**1994 —** ಟ್ಯುನೀಷಿಯಾಗೆ ಪ್ರವಾಸ ಮಾಡಿದರು.

ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆದ ವಿಜ್ಞಾನ ಸಮ್ಮೇಳನ ವನ್ನುದ್ದೇಶಿಸಿ ಮಾತನಾಡಿದರು.

**1995 —** ಬೀಜಿಂಗ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಮಾತನಾಡಿದರು.

**'ಮೆಟಾ ಮಾಡರ್ನ್ ಎರಾ' (Meta Modern Era)** ಪುಸ್ತಕ ಪ್ರಕಟವಾಯಿತು.

**1996 —** ಈಜಿಪ್ಟ್‌ನ ಕೈರೋಗೆ ಪ್ರವಾಸ ಮಾಡಿದರು.

ಭಾರತದ ಬೆಳಾಪುರದಲ್ಲಿ ಸಹಜ ಯೋಗ ಆರೋಗ್ಯ ಕೇಂದ್ರ ಆರಂಭವಾಯಿತು.

**1997 —** ಭಾರತದ ದೆಹಲಿಯಲ್ಲಿ ನಿರ್ಗತಿಕ ಮಹಿಳೆಯರು ಮತ್ತು ಮಕ್ಕಳಿಗಾಗಿ **'ಲವಿಂಗ್ ಹ್ಯಾಂಡ್ಸ್' (Loving Hands)** ಸ್ವಯಂಸೇವಾ ಸಂಸ್ಥೆ **(NGO)** ಸ್ಥಾಪಿಸಲಾಯಿತು.



© 2023 Shri Mataji Nirmala Devi Sahaja Yoga World Foundation

ಅಮೆರಿಕದ ನ್ಯೂಯಾರ್ಕ್‌ನ ಕ್ಯಾಥೀಡ್ರಲ್ ಆಫ್ ಸೇಂಟ್ ಜಾನ್ ದಿ ಡಿವೈನ್‌ನಲ್ಲಿ ಬೃಹತ್ ಸಾರ್ವಜನಿಕ ಕಾರ್ಯಕ್ರಮ ನಡೆಯಿತು.

**1998 —** ಇಟಲಿಯಲ್ಲಿ ನಡೆದ ವೈದ್ಯಕೀಯ ಸಮ್ಮೇಳನ ವನ್ನುದ್ದೇಶಿಸಿ ಮಾತನಾಡಿದರು.

ರಷ್ಯಾದಲ್ಲಿ ನಡೆದ ವಿಜ್ಞಾನ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

**2003 —** ಭಾರತದ ವೈತರಣಾ ದಲ್ಲಿ ಸಂಗೀತ ಮತ್ತು ಕಲೆಗಳ ಅಕಾಡೆಮಿ ಸ್ಥಾಪಿಸಿದರು.

**2008 —** ಉತ್ತರ ಇಟಲಿಯಲ್ಲಿ ನಡೆದ ಬೃಹತ್ ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡಿದರು. ಇದು ಸುಮಾರು **3,000** ಧ್ವನಿಮುದ್ರಿತ ಉಪನ್ಯಾಸಗಳಲ್ಲಿ ಇತ್ತೀಚಿನದು ಎಂದು ಉಲ್ಲೇಖಿಸಲಾಗಿದೆ.

ಅದೇ ವರ್ಷ ನಿರ್ಮಲ ಪ್ರಶಾಂತ್ ರಾಷ್ಟ್ರೀಯ ಕೇಂದ್ರವನ್ನು ಉದ್ಘಾಟಿಸಲು ವಿಯೆನ್ನಾಕ್ಕೆ ಪ್ರವಾಸ ಮಾಡಿದರು.

**2010 —** ದೀಪಾವಳಿ ಆಚರಣೆಯ ಸಂದರ್ಭದಲ್ಲಿ ಕೊನೆಯ ಬಾರಿಗೆ ಭಾರತಕ್ಕೆ ಪ್ರವಾಸ ಮಾಡಿದರು.

ಇಟಲಿಯ ಜೆನೋವಾದಲ್ಲಿ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸುವ ಮೂಲಕ ಕ್ರಿಸ್‌ಮಸ್ ಆಚರಿಸಿದರು.

**2011 — 2011**ರ ಫೆಬ್ರವರಿ **23**ರಂದು**,** ಇಟಲಿಯ ಜೆನೋವಾದಲ್ಲಿ**, 87**ನೇ ವಯಸ್ಸಿನಲ್ಲಿ ಶ್ರೀ ಮಾತಾಜಿ ನಿರ್ಮಲಾ ದೇವಿಯವರು ಮಹಾಸಮಾಧಿ ಹೊಂದಿದರು.



© 2023 Shri Mataji Nirmala Devi Sahaja Yoga World Foundation